SPL.C(MMDR) No.3/2024
P.W.-2
C.W.-3

# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ, (ಗಂಗಾವತಿ ಆಸೀನ)

## SPL.C(MMDR) No.3/2024

ಇಂದು ದಿನಾಂಕ**- 08.06.2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯದ ಸಾಕ್ಷಿ ಕಟ್ಟೆಯಲ್ಲಿ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ಮಹ್ಮದ್ ರಫೀಕ್ |
| ತಂದೆ ಹೆಸರು- | ಹುಸೇನ್ ಸಾಬ್ |
| ವಯಸ್ಸು- | 38 ವರ್ಷ |
| ಉದ್ಯೋಗ- | ಗುಂಪು - ಡಿ ನೌಕರ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ |
| ವಾಸಸ್ಥಳ- | ಕೊಪ್ಪಳ |

**ಮುಖ್ಯ ವಿಚಾರಣೆ - ಪ್ರಾಜ್ಞ ಸರ್ಕಾರಿ ಅಭಿಯೋಜಕರಿಂದ -**

1. ನಾನು ಆಗಸ್ಟ್ 2016 ರಿಂದ ಕೊಪ್ಪಳದಲ್ಲಿರುವ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಕಛೇರಿಯಲ್ಲಿ ಗುಂಪು - ಡಿ ನೌಕರನಾಗಿ ಕೆಲಸ ಮಾಡುತ್ತಿದ್ದೇನೆ. ಚಾಸಾ-1ರವರು ನಾನು ಕೆಲಸ ಮಾಡುವ ಕಛೇರಿಯಲ್ಲಿ ಭೂ ವಿಜ್ಞಾನಿಯಾಗಿ ಕೆಲಸ ಮಾಡುತ್ತಿದ್ದರು.

2. ದಿನಾಂಕ 10.02.2020 ರಂದು ಗಂಗಾವತಿ ತಾಲೂಕಿನ ವೆಂಕಟಗಿರಿ ಗ್ರಾಮದ ಸರ್ವೆ ನಂ. 23ರಲ್ಲಿ ಅನಧಿಕೃತವಾಗಿ ಕಲ್ಲು ಗಣಿಗಾರಿಕೆ ಚಟುವಟಿಕೆ ನಡೆಯುತ್ತಿದೆ ಎಂದು ಚಾಸಾ- 1ರವರಿಗೆ ವಾಟ್ಸಪ್ ಸಂದೇಶದ ಮೂಲಕ ಮಾಹಿತಿ ಬಂದಿದ್ದು ಚಾಸಾ-1

ರವರು ನನ್ನನ್ನು ಗಂಗಾವತಿಗೆ ಕರೆದುಕೊಂಡು ಬಂದಿದ್ದು ಗಂಗಾವತಿಯಲ್ಲಿ ಚಾಸಾ-2ರವರನ್ನು ನಮ್ಮ ಜೊತೆ ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಖಾಸಗಿ ಕಾರಿನಲ್ಲಿ ಹೋದೆವು. ನಾವು ಮಾಹಿತಿ ಸ್ಥಳಕ್ಕೆ ಹೋದಾಗ ಬೆಳಿಗ್ಗೆ 10.00 ರಿಂದ 10.30 ಗಂಟೆ ಸಮಯವಾಗಿತ್ತು. ನಾವು ಸ್ಥಳಕ್ಕೆ ಹೋದಾಗ ಒಂದು ಟ್ರ್ಯಾಕ್ಟರ್ ಮತ್ತು ಅದರ ಜೊತೆ ಒಂದು ಕಂಪ್ರಶರ್ ಇದ್ದು ಅದರಲ್ಲಿ ಕಲ್ಲನ್ನು ಡ್ರಿಲ್ ಮಾಡುತ್ತಿದ್ದರು. ಅದರ ಜೊತೆ ಅಲ್ಲಿ ಇನ್ನೊಂದು ಟ್ರ್ಯಾಕ್ಟರ್ ಮತ್ತು ಟ್ರೇಲರ್ ಇತ್ತು. ಸದರಿ ಟ್ರೇಲರಿಗೆ ಕಲ್ಲನ್ನು ಲೋಡ್ ಮಾಡುತ್ತಿದ್ದರು. ಅಲ್ಲಿ ಆ ಯಂತ್ರಗಳನ್ನು ಚಾಲನೆ ಮಾಡುವವರು ಹಾಗೂ ಕಲ್ಲನ್ನು ಲೋಡ್ ಮಾಡುವವರು ಇದ್ದರು. ಅಲ್ಲಿ ಸುಮಾರು 3-4 ಜನ ಇದ್ದರು. ನಾವು ಹೋದಾಗ ನಮ್ಮನ್ನು ನೋಡಿ ಓಡಿ ಹೋದರು. ಚಾಸಾ- 1ರವರು ಸ್ಥಳದಲ್ಲಿದ್ದ ಯಂತ್ರಗಳನ್ನು ಹಾಗೂ ಕಲ್ಲುಗಳನ್ನು ಜಪ್ತಿ ಮಾಡಲು ಸ್ಥಳಕ್ಕೆ ಯಾರೂ ಪಂಚರು ಬರಲಿಲ್ಲ. ಆದ್ದರಿಂದ ಚಾಸಾ- 1ರವರು ಸ್ಥಳದಲ್ಲಿ ಮಹಜರು ಕ್ರಮ ಜರುಗಿಸಿ ಆ ಯಂತ್ರಗಳನ್ನು ಕಲ್ಲುಗಳ ಸಮೇತ ವಶಕ್ಕೆ ತೆಗೆದುಕೊಂಡರು. ಸದರಿ ಪಂಚನಾಮೆಗೆ ನನ್ನ ಸಹಿಯನ್ನು ಪಡೆದುಕೊಂಡರು. ಸದರಿ ಪಂಚನಾಮೆಯಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತಿದ್ದು ಸದರಿ ಪಂಚನಾಮೆಯಲ್ಲಿರುವ ನನ್ನ ಸಹಿಯನ್ನು ನಿ.ಪಿ. 1-ಎ ಗುರುತಿಸಿದ್ದೇನೆ. ಸ್ಥಳದಲ್ಲಿ ಜಪ್ತಿಪಡಿಸಿಕೊಂಡ ಟ್ರ್ಯಾಕ್ಟರ್, ಕಂಪ್ರೆಶರ್, ಟ್ರ್ಯಾಕ್ಟರ್, ಟ್ರೇಲರ್ ಮತ್ತು ಕಲ್ಲನ್ನು ನಿ.ಪಿ. 4 ರಿಂದ 8 ರ ಪೋಟೋಗಳಲ್ಲಿ ನೋಡಿ ಗುರುತಿಸುತ್ತಿದ್ದೇನೆ.

**ಪಾಟೀಸವಾಲು - ಆರೋಪಿ ಪರ ವಕೀಲರಿಂದ -**

3. ಚಾಸಾ- 1ರವರು ನನ್ನ ಮೇಲಾಧಿಕಾರಿ ಎಂದರೆ ಸರಿ. ನಾನು ಗುತ್ತಿಗೆ ನೌಕರನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಇದೇ ಮೊದಲ ಬಾರಿಗೆ ಇಂತಹ ಪ್ರಕರಣದಲ್ಲಿ ಸಾಕ್ಷ್ಯ

ನುಡಿಯುತ್ತಿದ್ದೇನೆ. ಅನಧಿಕೃತವಾಗಿ ಕಲ್ಲು ಗಣಿಗಾರಿಕೆ ಚಟುವಟಿಕೆ ನಡೆಯುತ್ತಿರುವ ಮಾಹಿತಿ ಚಾಸಾ-1 ರವರಿಗೆ ಮಾತ್ರ ಬಂದಿತ್ತು, ನನಗೆ ಬಂದಿರಲಿಲ್ಲ. ಚಾಸಾ- 1 ರವರಿಗೆ ಮಾಹಿತಿ ಬಂದಾಗ ನಾನು ಕಛೇರಿಯಲ್ಲಿದ್ದೆನು. ಆ ದಿನ ನಾನು ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಿರುತ್ತೇನೆ. ಆ ದಿನ ಕಛೇರಿಯಲ್ಲಿ ನಿರ್ವಹಿಸಿದ್ದ ಚಲನ-ವಲನ ವಹಿಗೆ ನಾನು ನಮೂದಿಸಿ ಸಹಿ ಮಾಡಿಲ್ಲ. ಕೊಪ್ಪಳದಿಂದ ವೆಂಕಟಗಿರಿ ಗ್ರಾಮಕ್ಕೆ 35-40 ಕಿಮೀ ದೂರ ಇದೆ. ಎಷ್ಟು ವಿಸ್ತೀರ್ಣದಲ್ಲಿ ಕಲ್ಲು ಗಣಿಗಾರಿಕೆ ನಡೆಯುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 23 ರ ಯಾವ ದಿಕ್ಕಿನಲ್ಲಿ ಕಲ್ಲು ಗಣಿಗಾರಿಗೆ ನಡೆಯುತ್ತಿತ್ತು ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ಅಲ್ಲಿ ರಸ್ತೆ ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹಾದು ಹೋಗುತ್ತದೆಂದು ಸಹ ನನಗೆ ಹೇಳಲಾಗುವುದಿಲ್ಲ. ನಾವು ವೆಂಕಟಗಿರಿಗೆ ಹೋಗಿದ್ದ ಮುಖ್ಯರಸ್ತೆ ವೆಂಕಟಗಿರಿಯಿಂದ ಉಡಮಕಲ್ಲು ಗ್ರಾಮಕ್ಕೆ ಹೋಗುತ್ತದೆ. ಸದರಿ ಮುಖ್ಯರಸ್ತೆಯಿಂದ 4-5 ಕಿಮೀ ದೂರದಲ್ಲಿ ಸರ್ವೆ ನಂಬರ್ 23 ರ ಸ್ವತ್ತು ಇತ್ತು. ಸದರಿ ಸ್ವತ್ತಿನ ಸುತ್ತಮುತ್ತ ರೈತರ ಜಮೀನುಗಳು ಇದ್ದವು ಎಂದರೆ ಸಾಕ್ಷಿ ನುಡಿಯತ್ತಾರೆ, ಸ್ವಲ್ಪ ದೂರದಲ್ಲಿವೆ. ನಿ.ಪಿ. 4 ರಿಂದ 8 ರ ಪೋಟೋಗಳನ್ನು ನಾನು ಅದರ ಜೊತೆ ನಿಂತಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ, ನಾನೇ ಪೋಟೋ ತೆಗೆದಿರುತ್ತೇನೆ. ಸದರಿ ಪೋಟೋಗಳನ್ನು ಚಾಸಾ-1 ರವರ ಮೊಬೈಲಿನಲ್ಲಿ ತೆಗೆದಿರುತ್ತೇನೆ. ಅವರು ಪೋಟೋಗಳಿಗೆ ನಿಂತಿಲ್ಲ. ನಿ.ಪಿ. 1 ನ್ನು ನಾನು ಹೇಳಿ ಬರೆಸಿಲ್ಲ. ನಿ.ಪಿ. 1 ರಲ್ಲಿ ಬರೆದಿರುವ ವಿಚಾರಗಳ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ನಿ.ಪಿ. 1 ರ

ಮೊದಲನೇ ಪುಟದಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ನಿ.ಪಿ. 1 ನ್ನು ಕಛೇರಿಯಲ್ಲಿ ಬರೆದು ನಂತರ ಅದರಲ್ಲಿ ನನ್ನ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಅಂಕಿ-ಅಂಶಗಳಿಗಾಗಿ ಹಾಗೂ ಕೆಲಸ ಮಾಡಿದ್ದೇವೆ ಎಂದು ತೋರಿಸಲು ಚಾಸಾ- 1 ರವರು ನೋಂದಾಯಿಸಿದ ಪ್ರಕರಣಕ್ಕೆ ಅನುಕೂಲವಾಗಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಗಿದೆ.)

ಓ. ಹೇ. ಕೇ. ಸರಿ ಇದೆ.

(**ವೇದಮೂರ್ತಿ ಬಿ.ಎಸ್.**)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಪ್ಪಳ (ಗಂಗಾವತಿ ಆಸೀನ).